# ‘ದೊಡ್ಡಾಟದ ಪದಗಳು ಮತ್ತು ಕುಣಿತಗಳು’




ಧಾರವಾಡ: ದೊಡ್ಡಾಟ ಸಣ್ಣಾಟದ ಕಲಾವಿದರನ್ನು ಬಳಸಿಕೊಂಡು ಬರೀ ಪಿ.ಎಚ್.ಡಿ ಪ್ರಬಂಧಕ್ಕಾಗಿ ಆಯಾ ಕಲಾವಿದರ ಸಂದರ್ಶನ ಮಾಡಿ ಅವರಿಂದ ಎಲ್ಲ ಮಾಹಿತಿ ಪಡೆದು ಆ ಪ್ರಬಂಧ ಮಂಡಿಸಿ ಪಿ.ಎಚ್.ಡಿ. ಪಡೆದು ಆಮೇಲೆ ಆ ಕಲೆ, ಕಲಾವಿದರನ್ನು ಮರೆತು, ಬರೀ ಸಂಶೋಧಕರಾಗಿ ನಾಡ ಸುತ್ತಿ ತಾವೇ ಅಧಿಕೃತ ವಾರಸುದಾರರು ಎಂದು ಬೀಗುವ ಸಂಶೋಧಕರು ಆ ಕಲಾ ಪ್ರದರ್ಶನದಲ್ಲಿ ಭಾಗಿಯಾಗದರೆ ಮಾತ್ರ ದೊಡ್ಡಾಟ, ಸಣ್ಣಾಟಗಳು ಪ್ರಪಂಚದುದ್ದಕ್ಕೂ ಪರಿಚಯಿಸಿ, ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕುಂದಗೋಳದ ಬಯಲಾಟ ಕಲಾವಿದ ವೀರೇಶ ಬಡಿಗೇರ ಅಭಿಪ್ರಾಯಪಟ್ಟರು. ಅವರು ಸಂಘದ ಜಾನಪದ ಮಂಟಪವು ದಿನಾಂಕ ೬-೨-೨೦೧೯ ರಂದು ಆಯೋಜಿಸಿದ್ದ **‘ದೊಡ್ಡಾಟದ ಪದಗಳು ಮತ್ತು ಕುಣಿತಗಳು’** ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿ, ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ವೀರೇಶ ಬಡಿಗೇರ, ಬರೀ ಮೂರು ಜಿಲ್ಲೆಯಲ್ಲಿಯ ಯಕ್ಷಗಾನ, ಪ್ರಪಂಚದುದ್ದಕ್ಕೂ ಪರಿಚಯವಾಗಲು ಡಾ. ಶಿವರಾಂ ಕಾರಂತರಾದಿಯಾಗಿ ಹಲವಾರು ಸಂಶೋಧಕರು ಪ್ರಾಯೋಗಿಕವಾಗಿ ಭಾಗವಹಿಸಿದರು. ಆದರೆ, ನಮ್ಮ ದೊಡ್ಡಾಟ, ಸಣ್ಣಾಟದ ಸಂಶೋಧಕರು ಯಾರೂ ಆ ಕೆಲಸ ಮಾಡಲಿಲ್ಲ. ಶ್ರೀ ಕೃಷ್ಣ ಪಾರಿಜಾತವನ್ನು ಜಾನಪದ ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಬಸವಲಿಂಗಯ್ಯ ಹಿರೇಮಠ ಪರಿಷ್ಕರಣೆ ಮಾಡಿದ್ದು, ಈಗಾಗಲೇ ಅಮೇರಿಕಾದಲ್ಲಿಯೂ ಅದರ ಪ್ರಯೋಗ ಕಲಿಸಿ ಬಂದಿದ್ದಾರೆ. ಆದರೆ, ಬರೀ ಸೊಲಬಕ್ಕನವರ ತಂಡ, ಮಾಳವಾಡ ಅವರ ತಂಡ ಬಿಟ್ಟರೆ ಯಾವ ಸಂಶೋಧಕರೂ ಈ ಕಡೆ ಚಿಂತಿಸುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ವೈದ್ಯರೂ ಹಾಗೂ ಕಲಾವಿದರಾದ ಡಾ. ಎಂ.ಜಿ. ಹಿರೇಮಠ ಅವರು ಮಾತನಾಡಿ, ಬಯಲಾಟಗಳು ನಾಡಿನ ಪ್ರತೀಕಗಳು. ಇವುಗಳನ್ನು ಉಳಿಸಲು ಸಾರ್ವಜನಿಕರಾಧಿಯಾಗಿ ಎಲ್ಲರೂ ಪ್ರಯತ್ನಿಸೋಣ. ಇಲ್ಲಿಯ ಈ ಕಾರ್ಯಕ್ರಮ ಅತೀ ಸುಂದರವಾಗಿ ಮೂಢಿ ಬಂದಿದೆ. ಇಂಥ ಕಲೆ ಕಲಾವಿದರನ್ನು ಉಳಿಸಿ, ಬೆಳೆಸಲು ವಿದ್ಯಾವರ್ಧಕ ಸಂಘವನ್ನು ಶ್ಲಾಘಿಸಿದರು.

ದೊಡ್ಡಾಟದ ಪದಗಳನ್ನು ನವಲಗುಂದದ ಯೋಗೀಶ್ವರ ದೊಡ್ಡಾಟ ತಂಡದವರು ಹಾಡಿದರೆ, ಮೊರಬದ ದೇವಪ್ಪ ಮಲ್ಲಪ್ಪ ಅಜ್ಜಣ್ಣವರ ತಂಡದವರು ದೊಡ್ಡಾಟ ಕುಣಿತ ಪ್ರಸ್ತುಪಡಿಸಿದರು.

ಜಾನಪದ ಮಂಟಪದ ಸಂಚಾಲಕಿ ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ, ಹಿರಿಯ ಕಲಾವಿದ ಬಸವಲಿಂಗಯ್ಯ ಹಿರೇಮಠ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಲತಾ ಮಂಟಾ ಪ್ರಾರ್ಥಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಜಯಶ್ರೀ ಗೌಳಿಯವರ ಮಾಡಿದರು. ಆಶಾ ಸೈಯ್ಯದ ಸ್ವಾಗತಿಸಿದರು. ಲತಾ ಮುಳ್ಳೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಡಾ. ವಿಶ್ವನಾಥ ಚಿಂತಾಮಣಿ, ಲಕ್ಷ್ಮಣ ಬಕ್ಕಾಯಿ, ಆರ್.ಡಿ. ಪಾಟೀಲ, ಸೋಮಶೇಖರ ಜಾಡರ, ಡಾ, ವಿದ್ಯಾ ಕುಂದರಗಿ, ಮಧುಮತಿ ಸಣಕಲ್ಲ, ಶಶಿಭೂಷಣ ಹಿರೇಮಠ, ಲಕ್ಷ್ಮಣ ಪುರದ, ಎ.ಬಿ. ಹೆಗ್ಗೇರಿ, ಚನಬಸಪ್ಪ ಅವರಾದಿ, ಮಲ್ಲಪ್ಪ ಹೊಂಗಲ, ಪುರದನಗೌಡರ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ವಿಶ್ವೇಶ್ವರಿ ಬ. ಹಿರೇಮಠ**
ಸಂಚಾಲಕರು, ಜಾನಪದ ಮಂಟಪ
ಮೊ: ೮೩೧೭೪೧೬೬೫೪